## ಸಾಂತ್ವನ ಸುಖದ ಸೇವೆ

ಜಪಾನ್ ದೇಶವು ಸಣ್ಣಕಣ್ಣಿನ ಚೆಲುವ ಚೆಲುವೆಯರ ನಾಡು, ತಾಂತ್ರಿಕ ಪ್ರಗತಿಗೆ ಹೆಸರುವಾಸಿಯಾದುದು. ತಂತ್ರಜ್ಞಾನ ಕುಶಲಮತಿಗಳ ಆ ದೇಶದಲ್ಲೂ ಸಂಪ್ರದಾಯದ ಬೇರುಗಳಿವೆ. ದೇಶದ ರಾಜಧಾನಿ ಟೋಕಿಯೊದಲ್ಲಿ ಬಗೆಬಗೆಯ ಸೆಕ್ಸುವಲ್ ಶಾಪ್‌ಗಳು, ಬಾರ್‌ಗಳು, ಕ್ಲಬ್‌ಗಳಿವೆ. ಆದರೆ, ಒಂದು ದಶಕದ ಹಿಂದೆಯೇ ಅಕಿಹಬರ ಎಲೆಕ್ಟ್ರಾನಿಕ್ಸ್ ಡಿಸ್ಟ್ರಿಕ್ಟ್‌ನಲ್ಲಿ ವಿಚಿತ್ರವಾದ ಸೇವೆಯೊಂದು ಶುರುವಾಯಿತು. ಲೈಂಗಿಕ ಸಂಪರ್ಕ ಇಲ್ಲದೆಯೇ, ಗಂಡುಹೆಣ್ಣಿನ ನಡುವೆ ಮಾನಸಿಕ ಅನುಭೂತಿ ದೊರಕಿಸಿಕೊಡುವ ಕಾಲಕ್ಷೇಪದ ರೀತಿಯ ಸೇವೆಯದು. ವಿಲಕ್ಷಣವಾದ ಮೇಡ್ ಕೆಫೆಗಳು, ಲಿಂಗರಿ ಬಾರ್‌ಗಳು ಇದ್ದ ಸ್ಥಳದಲ್ಲಿ ಇಂತಹ ಸ್ಪೆಷಾಲಿಟಿ ಶಾಪ್ ಒಂದು 2012ರಲ್ಲಿಯೇ ಸುದ್ದಿ ಮಾಡಿತ್ತು. 'ಸೋಯ್ನೆಯಾ' ಎನ್ನುವ ಸಣ್ಣ ಅಂಗಡಿ ಆ ಪ್ರದೇಶದ ಕಟ್ಟಡವೊಂದರ ಮೂರನೇ ಮಹಡಿಯಲ್ಲಿ ಇತ್ತು. ಅಲ್ಲಿ ಒಂದಿಷ್ಟು ಸಾಂತ್ವನ, ಮಮಕಾರ ಬಯಸುವ ಯುವಕರಿಗೆ ಸ್ವಾಗತವಿತ್ತು. ಯುವತಿಯರು ಅವರಿಗಾಗಿ ಕಾಯುತ್ತಿದ್ದರು. ಇಬ್ಬರೂ ಪರಸ್ಪರ ಹರಟೆ ಹೊಡೆಯುವುದು, ಕಣ್ಣಲ್ಲಿ ಕಣ್ಣಿಟ್ಟು ನೋಡುವುದು, ಅಲ್ಲಿಯೇ ಪಟ್ಟಿಯಲ್ಲಿ ಉಲ್ಲೇಖಿತವಾಗಿದ್ದ ಕೆಲವು ವಸ್ತುಗಳನ್ನು ಬಳಸಿ ಪರಸ್ಪರ ಅನ್ಯೋನ್ಯತೆಯಿಂದ ಇರುವುದು ಸಾಧ್ಯವಿತ್ತು. ಆದರೆ, ಸೆಕ್ಸ್ ನಿಷಿದ್ಧ. ಜಪಾನ್‌ನಲ್ಲಿ ತರುಣರು ದೀರ್ಘಾವಧಿ ಕೆಲಸದಿಂದ ದಣಿದ ಮೇಲೆ ಮಲಗಲು ಒಂದು ತೊಡೆಯಿಲ್ಲದೆ, ತಮ್ಮ ಸಂಕಟ ಹೇಳಿಕೊಳ್ಳಲು ಕಿವಿಯಿಲ್ಲದೆ ತಲ್ಲಣಿಸುತ್ತಿದ್ದ ಸಂದರ್ಭದಲ್ಲಿ ಹುಟ್ಟಿಕೊಂಡ ಸೇವೆ ಇದು. ಒಂದು ತಾಸು ಅಲ್ಲಿ ಕಾಲ ಕಳೆಯಲು ಆ ಕಾಲಘಟ್ಟದಲ್ಲೇ 9 ಸಾವಿರ ಯೆನ್ ಅಥವಾ 120 ಅಮೆರಿಕನ್ ಡಾಲರ್ (ಈಗಿನ ಬೆಲೆಯಲ್ಲಿ ಸುಮಾರು 10 ಸಾವಿರ ರೂಪಾಯಿ) ವ್ಯಯಿಸಬೇಕಾಗಿತ್ತು. 600 ಚದರ ಅಡಿ ಜಾಗದಲ್ಲಿ ಇದ್ದ 'ಸೋಯ್ನೆಯಾ'ದಲ್ಲಿ ಏಳು ಸಣ್ಣ ಸಣ್ಣ ಕ್ಯೂಬ್‌ಗಳಿದ್ದವು. ಎಲ್ಲದರಲ್ಲೂ ಮಂದ ಬೆಳಕು. ಕ್ವೀನ್ ಸೈಜ್‌ನ ಒಂದು ಮಂಚ. ಅದರ ಮೇಲೆ ಟೆಡ್ಡಿ ಬೇರ್ ಇತ್ಯಾದಿ ಪ್ರಾಣಿಗಳ ಪ್ರತಿಕೃತಿಗಳು, ಹೃದಯದಾಕಾರದ ದಿಂಬುಗಳು, ಮೋಡಗಳಾಕಾರದ ಲ್ಯಾಟೀನು, ಜೋಗುಳ ಉಲಿಯುವ ಸಂಗೀತದ ಉಪಕರಣ... ಎಲ್ಲ. ದಣಿದು ಬಂದ ತರುಣ ಅಲ್ಲಿ ತನ್ನ ಸಂಕಷ್ಟ ಅರುಹುತ್ತಾ ತರುಣಿಯೊಬ್ಬಳ ತೊಡೆ ಮೇಲೆ ಅಥವಾ ಅವಳ ಪಕ್ಕ ಅಂಗಾತವಾಗುತ್ತಿದ್ದ. ಅವನ ತಲೆಮೇಲೆ ಕೈಯಾಡಿಸುತ್ತಾ ತರುಣಿ ಒಂದೆರಡು ಸಾಂತ್ವನದ ಮಾತುಗಳನ್ನು ಆಡಿ, ಜೋಗುಳ ಕೇಳಿಸಿ ನಿದ್ರೆಗೆ ಜಾರಿಸುತ್ತಿದ್ದಳು.

'ಸೋಯ್ನೆಯಾ' ಅಂಗಡಿಯು ಯಶಸ್ವಿಯಾದ ಮೇಲೆ ಅದರ ವ್ಯವಸ್ಥಾಪಕರಲ್ಲಿ ಒಬ್ಬರಾದ ಕೊಡಾ ಎನ್ನುವವರು, ತಮ್ಮ ಅಂಗಡಿಯ ಸೇವಾಸೌಕರ್ಯಗಳ ಕುರಿತು

ಜಪಾನ್‌ನಲ್ಲಿ ತರುಣರು ದೀರ್ಘಾವಧಿ ಕೆಲಸದಿಂದ ದಣಿದ ಮೇಲೆ ಮಲಗಲು ಒಂದು ತೊಡೆಯಿಲ್ಲದೆ, ತಮ್ಮ ಸಂಕಟ ಹೇಳಿಕೊಳ್ಳಲು ಕಿವಿಯಿಲ್ಲದೆ ತಲ್ಲಣಿಸುತ್ತಿದ್ದ ಸಂದರ್ಭದಲ್ಲಿ ಹುಟ್ಟಿಕೊಂಡ ಸೇವೆ– ಉದ್ಯಮ 'ಸೋಯ್ನೆಯಾ'.

## ಜೀವಿತಾವಧಿಯ ಖಾತರಿಯೇ ಇಲ್ಲ

**-ಚೈತ್ರಿಕಾ ಹರ್ಗಿ**
**ಕಮ್ಯುನಿಕೇಷನ್ಸ್ ಸಂಸ್ಥೆಯ ಟೀಮ್ ಲೀಡರ್**



ಮದುವೆ ಮಾಡಿಕೊಳ್ಳದೇ ಇರುವ ನಿರ್ಧಾರ ಕೈಗೊಂಡವರನ್ನು ನಾನು ಕಂಡಿರುವೆ. ಹಾಗೆಯೇ ಮಕ್ಕಳು ಬೇಡವೇ ಬೇಡ ಎಂದವರನ್ನೂ ನೋಡಿರುವೆ. (ಮಕ್ಕಳಿಲ್ಲದೇ ಇರಲು ನಿರ್ಧಾರ ತೆಗೆದುಕೊಂಡವರ ಬಗೆಗೆ ನಾನು 'ಸುಧಾ' ಪತ್ರಿಕೆಗೆ ಮುಖಪುಟ ಲೇಖನ ಬರೆದಿದ್ದೆ.) ದೇಶದ ಜನಸಂಖ್ಯೆ ಹೆಚ್ಚಾಗಿದೆ. ಶಿಕ್ಷಣ ದುಬಾರಿಯಾಗಿದೆ. ಮಕ್ಕಳನ್ನು ಪಡೆಯುವುದು ಮುಂದೆ ಇಳಿಗಾಲದಲ್ಲಿ ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬ ಸಹಜ ನಿರೀಕ್ಷೆಯಿಂದ. ಆದರೆ, ಈಗ ಜೀವಿತಾವಧಿಯ ಕುರಿತೇ ಯುವಜನತೆಗೆ ನಂಬಿಕೆ ಹೊರಟುಹೋಗಿದೆ.

ಮೂವತ್ತೈದರ ನಂತರ ಮಕ್ಕಳನ್ನು ಮಾಡಿಕೊಂಡರೆ, ಆ ಮಕ್ಕಳು ಹದಿನೆಂಟು ವಯಸ್ಸು ದಾಟುವವರೆಗೆ ತಾವು ಬದುಕಿರುವುದರ ಬಗೆಗೆ ಖಾತರಿಯೇ ಇಲ್ಲ. ಆರೋಗ್ಯದ ಸಮಸ್ಯೆಗಳು ಹೆಚ್ಚುತ್ತಿರುವುದು ಇಂತಹ ಒಂದು ಅಭಿಪ್ರಾಯ ಮೂಡಲು ಕಾರಣವಾಗಿದೆ. ಇವೆಲ್ಲದರ ಮೊತ್ತವೆನ್ನುವಂತೆ ಜನರು ಒಂಟಿಯಾಗಿರುವ ಅಥವಾ ಮಕ್ಕಳು ಬೇಡ ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಕೊಳ್ಳುಬಾಕತನದ ಪರಿಣಾಮ ಇದರ ಮೇಲಿದೆ ಎನ್ನುವುದು ಕೂಡ ಸತ್ಯ. ತನ್ನನ್ನು ತಾನು ಚೆನ್ನಾಗಿ ನೋಡಿಕೊಳ್ಳುತ್ತಾ, ತನಗೆ ಬೇಕಾದ ಎಲ್ಲವನ್ನೂ ಪಡೆಯುವುದು ಮುಖ್ಯ ಎಂಬ ಭಾವನೆ ಯುವಜನತೆಯಲ್ಲಿ ಮೂಡುತ್ತಿದೆ. ಶಿಕ್ಷಣ, ಆರೋಗ್ಯ ಇವೆಲ್ಲವೂ ದುಬಾರಿಯಾಗಿರುವ ಕಾಲಘಟ್ಟದಲ್ಲಿ ಮಗುವನ್ನು ಬೆಳೆಸುವುದು, ಅದೂ ಕಡಿಮೆ ಸಂಬಳದಲ್ಲಿ ಈಗ ಅಸಾಧ್ಯ. ಹೀಗಾಗಿಯೇ ವಿವಾಹದ ಸಾಂಸ್ಥಿಕ ಸ್ವರೂಪದಿಂದ ಹೊರಗಿರುವ ನಿರ್ಧಾರವನ್ನು ಅನೇಕರು ತೆಗೆದುಕೊಳ್ಳುತ್ತಿದ್ದಾರೆ. ವಾಟ್ಸ್ ಆ್ಯಪ್ ಗ್ರೂಪ್ ಒಂದು ಇಂತಹ ನಿರ್ಧಾರ ಕೈಗೊಂಡವರಿಂದಲೇ ಇರುವುದನ್ನು ನಾನು ಗಮನಿಸಿದ್ದೇನೆ.

ಈಗ ಕಮ್ಯುನಿಟಿ ಬದುಕಿನ ಪರಿಕಲ್ಪನೆ ಹೊಸ ರೂಪವನ್ನು ಪಡೆದುಕೊಳ್ಳುತ್ತಿದೆ. ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಇರುವವರೆಲ್ಲ ಒಂದು ಕುಟುಂಬ ಎನ್ನುವಂತೆ ಬದುಕುತ್ತಾರೆ. ಅಲ್ಲಿ, ಒಬ್ಬಳು ಅಥವಾ ಒಬ್ಬ – ತನಗೆ ಮಗು ಬೇಡ ಎಂದು ಬದುಕುತ್ತಿದ್ದರೂ, ಬೇರೆ ಯಾರದೋ ಮಕ್ಕಳ ಜೊತೆ ಒಡನಾಟ ಸಾಧ್ಯವಿರುತ್ತದೆ. ಒಂದೇ ಕುಟುಂಬದ ಕೆಲವರು ಒಂದು ಕಡೆ ವಾಸ ಮಾಡುವಾಗ ಮದುವೆ ಆಗದ ಅಥವಾ ಮಕ್ಕಳು ಬೇಡದ ಜೀವಗಳಿಗೂ ಒಲವು–ಕಕ್ಕುಲತೆ ಎಲ್ಲವೂ ಸಿಗಲು ಸಾಧ್ಯವಿದೆ. 'ಕೇರ್ ಕೈಸಿಸ್' ಎನ್ನುವುದು ಇವೆಲ್ಲದರ ಪರಿಣಾಮವೇ ಹೌದು.